ಇಸ್ತಿಹಾರ್.

ತಾರೀಖು 21ನೇ ಜನವರಿ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಿಸಿರುವ ರಿಜಿಸ್ಟರಾದ ದಸ್ತೈವಜುಗಳು ಯರಡು ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಿರುವ ಸಬ್ ರಿಜಿಸ್ಟ್ರಿ ಆಫಿಸ್‌ಗಳಲ್ಲಿ ವಾರಸ್‌ದಾರ್ರು ಹಾಜರಾಗಿ ವಾಪಸು ಪಡಿಯದೆ ನಿಂತು ಇರುತ್ತವೆ ಈ ತಾರೀಖು ಲಾಗಾಯತು ಬಂದು ತಿಂಗಳ ವಳಗಾಗಿ ಸದರೀ ತಂಸೂಕ್ಗಳನ್ನ ಹಾಜರ್ಮಾಡಿದವರಾಗಲಿ ಅವರ ಪ್ರತಿನಿಧಿಗಳಾಗಲಿ ಅಥವಾ ತಂಸೂಕ್ಗಳಿಗೆ ಬಾಧ್ಯತೆವುಳ್ಳವರಾಗಲಿ ಸಬ್ ರಿಜಿಸ್ಟ್ರಿ ಆಫಿಸ್‌ಗಳಲ್ಲಿ ಹಾಜರಾಗಿ ತಮ್ಮ ದಸ್ತೈವಜುಗಳನ್ನು ವಾಪಸ್ ಪಡಿಯಪೇಕು ತಪ್ಪಿದರೆ ರಿಜಿಸ್ಟ್ರೇಷ್ಯ ಆಕ್ಟ್ 85ನೇ ಸೆಕ್ಷನ್ ಮೇರಿಗೆ ಸದರೀ ದಸ್ತೈವಜುಗಳು ನಾಶಪಡಿಸಲ್ಪಡುತ್ತವೆ.

ಸಬ್ ರಿಜಿಸ್ಟ್ರೀ ಆಫಿಸ್ ಹೆಸರು.	ಬುಕ್ಕು ಮತ್ತು ರಿಜಿಸ್ಟರ್ ನಂಬರು.	ತಂಸೂಕು ಬರದುಕೊಟ್ಟವರ ಹೆಸರು.	ತಂಸೂಕು ಬರಕಿ ಕೊಂಡವರ ಹೆಸರು.	ದಸ್ತೈವಜು ತಾರೀಖು.	ವಜಸ್ತಾದ ತಾರೀಖು.	ದಸ್ತೈವಜಿನ ಸ್ವಭಾವ.
ತರೀಕೆರೆ ತಾಲ್ಲೂಕು ಸಬ್ ರಿಜಿಸ್ಟ್ರಿ ಆಫಿಸ್.	1ನೇ ಬುಕ್ಕು 116	ಹೊಸಹಳ್ಳಿ ಮೂಡಬಾಗಿಲ ನಿಂಗಂಣ	ಹೊಸಹಳ್ಳಿ ಹೊಮ್ಮನಮಗ ಚನ್ನಮಲ್ಲಂಣ	13—6—92	13—6—92	40 ಜಮ್ರ್ಮಾ ಕ್ರಯಪತ್ರ
	1892—93					
	161	ಕರಡಿ ರಾಮೆನಹಳ್ಳಿ ಹನುಮಂಣನಮಗ ಬೊಮ್ಮ	ಹೊಸಹಳ್ಳಿ ಗೌಡ ನಂಜಪ್ಪನಮಗ ಲಿಂಗಪ್ಪ	25—6—92	25—6—92	200 ಜಮ್ರ್ಮಾ ಕ್ರಯಪತ್ರ
	92—93					
	220	ಕುಳವಾಡಿ ಕರಿಯಂಣನಮಗ ದಾಸಂಣ	ಕುಳವಾಡಿ ಸಂಣ ಹನುಮನಮಗ ಹನುಮ	29—7—92	6—8—92	25 ಹುಲ್ಲುಮನೆ ಕ್ರಯ ಪತ್ರ
	92—93					
	235	ಬೆಲಗೂರು ಕಟ್ಟಮರಿಯಪ್ಪನ ಮಗ ರೇವಂಣ	ಹಲಸಗೊಂದಿ ಗುರುಬಕಟ್ಟಿಮಗ ನಂಜಪ್ಪ	11—5—92	17-8-92	100 ಹುಲ್ಲುಮನೆ ಕ್ರಯ ಪತ್ರ
	92—93					
	398	ಗಂಗೂರು ಮರುಳಯ್ಯನಮಗ ಗುರಂಣ	ಪುಟ್ಟಲಿಂಗಮ್ಮನ ಬಸಂಣನ ಮಗ ಚಂದಯ್ಯ	10-11-92	9—12—92	40 ಜಮ್ರ್ಮಾ ಕ್ರಯಪತ್ರ
	92—93					
ಕೊಪ್ಪ ತಾಲ್ಲೂಕು ಸಬ್ ರಿಜಿಸ್ಟ್ರಿ ಆಫಿಸ್	18	ಹೊಸಮನೆ ನಂಜಪ್ಪಯ್ಯನ ಮಗ ಸುಬ್ಬಾಯ	ಮುನಿಯಾರ ಸುಬ್ರಾಯರ ಮಗ ಸಾಹುಕಾರ್ ಕೃಷ್ಣಪ್ಪ	15-12-91	15—4—92	99 ಜಮ್ರ್ಮಾ ಕ್ರಯಪತ್ರ
	92—93					
	146	ಕಾಗಿನಗೊಳಿ ತಮ್ಮಂಣಗವುಡನಮಗ ರಾಮಂಣ	ಸಂಪಿಗೆವಾಡಿದ ರಾಘವೇಂದ್ರ ತೀರ್ಥಸ್ವಾಮಿಗಳವರು	2—7—92	3—9—92	ಸಾಲಿಯಾನಾ 26 ಖಂಡಗ ಭತ್ತ ಕೊಡತಕ್ಕ ಗೇಣಿ ಕರಾರು
	92—93					
ಯಡೆಹಳ್ಳಿ ಸಬ್ ರಿಜಿಸ್ಟ್ರಿ ಆಫಿಸ್	35	ಕಾನೂರಲ್ಲಿರುವ ಹಿರಿಯಂಣಪ್ಪನ ಮಗ ರಾಮುಚಂದ್ರಯ್ಯ	ಸೂಪರ್‌ವೈಜರ್ ಮೆ॥ ಸೂರನಾರಾಯಣರಾವ್	31—8—92	2—9—92	150 ಜಮ್ರ್ಮಾ ಕ್ರಯಪತ್ರ
	92—93					
ಶ್ರಂಗೇರಿ ಸಬ್ ರಿಜಿಸ್ಟ್ರಿ ಆಫಿಸ್	96	ಮರಾಟೆ ಹುವನ ಮಗ ಪುಟ್ಟ	ಹಳೆಮನೆ ತಮ್ಮಯ್ಯನವಗ ರಾಮಪ್ಪ	7—1—92	12—1—92	250 ತೋರಡವು ಪತ್ರ
	91—92					
	97	ನಿಡ್ಡಂಣನ ಮಗ ಕಾಳಂಣ	ಕಳಸಭಟ್ಟರಮಗ ವೆಂಕಟಭಟ್ಟ	24-9-91	22—1—92	192 ಬಾಗಾಯತು ಕ್ರಯ ಪತ್ರ
	91—92					

ಸಬ್ ರಿಜಿಸ್ಟ್ರೀ ಆಫಿಸ್ ಹೆಸರು.	ಬುಕ್ಕು ಮತ್ತು ರಿಜಿಸ್ಟರ್ ನಂಬರ್.	ತಂಸೂಕು ಬರದುಕೊಟ್ಟವರ ಹೆಸರು.	ತಂಸೂಕು ಬರಸಿಕೊಂಡವರ ಹೆಸರು.	ದಸ್ತೈವಜು ತಾರೀಖು.	ರಿಜಿಸ್ಟ್ರಾರ ತಾರೀಖು.	ದಸ್ತೈವಜಿನ ಸ್ವಭಾವ.
ಶ್ರಿಂಗೇರಿ ಸಬ್ ರಿಜಿಸ್ಟ್ರಾ ಆಫಿಸ್.	28 ——— 92—93	ನಂಜುಂಡಜೋಯಿಸರ ಹೆಂಡತಿ ಗಂಗಮ್ಮ	ಸೂಭಟ್ಟರಮಗ ಶಾಂಭಟ್ಟ	5—1—92	4—6—92	55—13—0 ಗೇಣಿ ಕರಾರು.
	58 ——— 92—93	ಮಲ್ಲಿಕಾರ್ಜುನಶಾಸ್ತ್ರಿ ಮಗ ಸುಬ್ಬಾಶಾಸ್ತ್ರಿ	ಕ್ರಿಷ್ಣಯ್ಯನ ಮಗ ಕಾಳಯ್ಯ	13-8-92	24-8-92	64 ಗೇಣಿ ಕರಾರು.
	ಬುಕ್ಕು ನಾಲ್ಕು 14 ——— 91—92	ಕುಕ್ಕಪಟ್ಟಮಗ ಅಂಗಡಿ ಶೇಷಶಟ್ಟ	ಅಂಣಯ್ಯಗವುಡನ ಮಗ ಹಿರಗಂಣಗವುಡ	16-12-91	28-1—92	ಭತ್ತದ ಫಸಲ್ 175 ಕ್ರಯಪತ್ರ
ಚಿಕ್ಕಮಗಳೂರು ಸಬ್ ರಿಜಿಸ್ಟ್ರಾ ಆಫಿಸ್.	1ನೇ ಬುಕ್ಕು 127 ——— 92—93	ಕುರುಬ ಚಿಕ್ಕಂಣನ ಮಗ ಚಿಕ್ಕಂಣ	ಕುರುಬರ ಅಚಂಣನ ಮಗ ದೊಡ್ಡಲಕ್ಕಣ್ಣ	11—5—92	11—5—92	10 ಜಮ್ರ್ಹಾ ಕ್ರಯಪತ್ರ.
	183 ——— 92—93	ಕಾಫಿಪ್ಲಾಂಟರ್ ಮಹಮ್ಮದ್ ಬಾಖರ್ ಸಾಹೇಬ್	ತವಕಲ್ ಸಾಹೇಬರ ಮಗ ಖಾಸಿಂಸಾಹೆಬ್	3-6—92	4—6-92	150 ಕಾಫಿತೋಟ ಕ್ರಯಪತ್ರ.
	544 ——— 92—93	ವೀರಪ್ಪಯ್ಯನಮಗ ಶಿದ್ದಲಿಂಗಯ್ಯ	ಅಮೃತೇಗವುಡನ ಮಗ ಈರೇಗವುಡ	1-11-92	1-11-92	200 ರೀಡು ದಸ್ತೈವಜು

ಜೆ. ಡಬ್ಲ್ಯಯು. ನೈಟ್,
ರಿಜಿಸ್ಟ್ರಾರ್.

ಮೈಸೂರ ಗೆಜೆಟ್ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ. ಮತ್ತು ಸದರೀ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರು ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾನಲು ಮೈಸೂರು ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಜಷ್ಟ್ ಮಾಹೇ ಯಾ ಕ್ವಾರ್ಟರಿಗೆ		ದಾಮಾಷಾಯಿ ಪ್ರಕಾರ ದರಗಳು.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇರ್ಸ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.		0 8
ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.		

1891ನೇ ಇಸವಿ ಜುಲೈ 2ನೇ ಮುಕ್ತಂ 155ನೇ ನಂಬರ್ ಉಳ್ಳ ಗವರ್ನ್‌ಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಕೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನಭಾವಿಕೆ ಕೆಲಸ ನೋಡುತಲಿದ್ದಾರೆಂಬುದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ವಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

ಸಿವಿಲ್ ಕೋರ್ಟ್‌ನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸುಗಳು:—